**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ:ಆಯವ್ಯಯ:ಸುತ್ತೋಲೆ:ಸ.ಪ್ರ.ದ.ಕಾ: :2020-2021

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:11.08.2020.

**ಸುತ್ತೋಲೆ**

ವಿಷಯ: ವಿವಿಧ ಬಾಕಿಗಳು ಮತ್ತು 2019-20ನೇ ಸಾಲಿನ ವೇತನ ಪಾವತಿಸಲು ಅವಶ್ಯವಿರುವ ಅನುದಾನದ ಮಾಹಿತಿ ನೀಡುವ ಬಗ್ಗೆ

ಉಲ್ಲೇಖ ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:04.06.2020

****

ಈ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆಸಲ್ಲಿಸುತ್ತಿರುವ ಅಧಿಕಾರಿ/ನೌಕರರಗಳ ವಿವಿಧ ಬಾಕಿಗಳಾದ ವಾರ್ಷಿಕ ವೇತನ ಬಡ್ತಿ, ಟಿ.ಬಿ.ಎ, ಟಿ.ಬಿ.ಪಿ., ಪದನ್ನೋತಿ ಬಾಕಿ, ಪಿ.ಎಚ್.ಡಿ. ಮುಂಗಡ ಬಡ್ತಿ ಎ.ಜಿ.ಪಿ ಹಾಗೂ ಇತರೆ ಎಲ್ಲಾ ಬಾಕಿಗಳಗೆ ಸಂಬಂಧಿಸಿದಂತೆ, ಬೋಧಕ ಮತ್ತು ಬೋಧಕೇತರರ ಉಪ ಲೆಕ್ಕ ಶೀರ್ಷಿಕೆವಾರು ಮಾಹಿತಿಯನ್ನು ಪ್ರತ್ಯೇಕವಾಗಿ google form link ನಲ್ಲಿ ದಿನಾಂಕ:14.08.2020ರೊಳಗಾಗಿ ಸಲ್ಲಿಸಲು ಸೂಚಿಸಿದೆ. ಪ್ರತಿ ಬಾಕಿಗೆ ಸಂಬಂಧಿಸಿದ ಮಾಹಿತಿಯನ್ನು ಉಪ ಲೆಕ್ಕ ಶೀರ್ಷಿಕೆವಾರು ತಪ್ಪದೇ ಸಲ್ಲಿಸುವುದು ಉಪ ಲೆಕ್ಕ ಶೀರ್ಷಿಕೆವಾರು ಸಲ್ಲಿಸದ ಮಾಹಿತಿಯನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ.

ಮುಂದುವರೆದು, ಉಲ್ಲೇಖಿತ ಸುತ್ತೋಲೆಯಲ್ಲಿ 2019-20ನೇ ಸಾಲಿನಲ್ಲಿ ವೇತನ ಡ್ರಾ ಮಾಡದಿರುವ ಸಿಬ್ಬಂದಿಗಳ ಮಾಹಿತಿಯನ್ನು ಇ.ಎಂ.ಐ.ಎಸ್. ನಲ್ಲಿ ಲೆಕ್ಕ ಶೀರ್ಷಿಕೆವಾರು ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ 49 ಕಾಲೇಜುಗಳಿಂದ ಮಾಹಿತಿಯು ಸ್ವೀಕೃತವಾಗಿರುತ್ತದೆ. ಅಂತಿಮ ದಿನಾಂಕದ ನಂತರ ಹಲವಾರು ಕಾಲೇಜುಗಳಿಂದ ಇ.ಎಂ.ಐ.ಎಸ್. ನಲ್ಲಿ ಮಾಹಿತಿಯನ್ನು ಸಲ್ಲಿಸದೇ ಪತ್ರ ಮುಖೇನ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ಮಾಹಿತಿಯನ್ನು ಸಲ್ಲಿಸಲು ಮತ್ತೊಂದು ಅವಕಾಶವನ್ನು ನೀಡುತ್ತಾ, ಈ ಹಿಂದೆ ಮಾಹಿತಿಯನ್ನು ಸಲ್ಲಿಸಿದ್ದ 49 ಕಾಲೇಜುಗಳು ಒಳಗೊಂಡಂತೆ ಎಲ್ಲಾ ಕಾಲೇಜುಗಳು 2019-20ನೇ ಸಾಲಿನಲ್ಲಿ ವೇತನ ಪಾವತಿಸಲು ಅವಶ್ಯವಿರುವ ಅನುದಾನದ ಮಾಹಿತಿಯನ್ನು ಉಪ ಲೆಕ್ಕ ಶೀರ್ಷಿಕೆವಾರು google form link ನಲ್ಲಿ ದಿನಾಂಕ:14.08.2020ರೊಳಗಾಗಿ ಸಲ್ಲಿಸಲು ಸೂಚಿಸಿದೆ. ಅಂತಿಮ ದಿನಾಂಕದ ನಂತರ ಸಲ್ಲಿಸುವ ಕಾಲೇಜುಗಳ ಮಾಹಿತಿಯನ್ನು ಹಾಗೂ ಟಪಾಲಿನಲ್ಲಿ ಸಲ್ಲಿಸುವ ಮಾಹಿತಿಯನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲವೆಂದು ಕಟ್ಟುನಿಟ್ಟಾಗಿ ಸೂಚಿಸಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

**ವಿ.ಸೂ: 1)** ವೇತನದ ಮಾಹಿತಿಯನ್ನು ನೀಡುವಾಗ ವಿವಿಧ ಕಾರಣಗಳಿಂದ ಸಂಬಂಧಪಟ್ಟ ಮಾಹೆಯ ವೇತನವನ್ನು ಪೂರ್ಣವಾಗಿ ಡ್ರಾ ಮಾಡಲು ಸಾಧ್ಯವಾಗದಿರುವ ಮೊತ್ತವನ್ನು ಮಾತ್ರ ವೇತನದಡಿಯಲ್ಲಿ ನಮೂದಿಸತಕ್ಕದ್ದು. ಮೂಲ ವೇತನದಲ್ಲಿ ಕಡಿಮೆ ಕ್ಲೇಮು ಮಾಡಿರುವುದು, ಹಳೆ ವೇತನ ಶ್ರೇಣಿಯಲ್ಲಿ ವೇತನ ಡ್ರಾ ಮಾಡಿರುವುದು, ತುಟ್ಟಿಭತ್ಯೆ ಕಡಿಮೆ ಬಂದಿರುವಂತಹ ಪ್ರಕರಣಗಳಲ್ಲಿ ವ್ಯತ್ಯಾಸದ ಬಾಕಿಯನ್ನು ವಿವಿಧ ಬಾಕಿಗಳಡಿಯಲ್ಲಿ ನಮೂದಿಸತಕ್ಕದ್ದು.

2) ಏಪ್ರಿಲ್-2019 ರಿಂದ ನವೆಂಬರ್-2019ರ ಮಾಹೆವರೆಗಿನ ಯುಜಿಸಿ ವ್ಯತ್ಯಾಸ ಬಾಕಿಯ ವಿವರವನ್ನು ಈಗಾಗಲೇ ಎಲ್ಲಾ ಕಾಲೇಜುಗಳಿಂದ ಪಡೆದಿರುವುದರಿಂದ ಸದರಿ ವ್ಯತ್ಯಾಸ ಬಾಕಿಯನ್ನು ನಮೂದಿಸತಕ್ಕದಲ್ಲ.

3) ಉಪ ಲೆಕ್ಕ ಶೀರ್ಷಿಕೆ: (1) 002 – ಗ್ರೂಪ್ - ಎ & ಬಿ. ಮೂಲ ವೇತನ
(2) 003- ಗ್ರೂಪ್ - ಸಿ & ಡಿ ಮೂಲ ವೇತನ
(3) 011- ತುಟ್ಟಿಭತ್ಯೆ
(4) 014- ಮನೆಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಹಾಗೂ ಇತರೆ ಎಲ್ಲಾ ಭತ್ಯೆಗಳು
(5) 020 – ವೈದ್ಯಕೀಯ ಭತ್ಯೆ

**ಇವರಿಗೆ:**

**ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು.**

ಪ್ರತಿಯನ್ನು:

1. ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ , ಕೇಂದ್ರ ಕಛೇರಿ, ಬೆಂಗಳೂರು – ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮಕ್ಕಾಗಿ

2.ಕಛೇರಿ ಪ್ರತಿ.